ಮಿಳಿತಗೊಂಡಿದ್ದ ತಿಂಡಿ, ಅಂಗಳದಂಚಿನ ಗಿಡಗಳಲ್ಲಿ ಅರಳಿ ನಿಂತಿದ್ದ ನಾನಾ ಥರದ ಹೂವುಗಳ ಘಮಲು, ಮನೆಯೊಳಗೆ ಹೆಜ್ಜೆ ಇರಿಸುವಲ್ಲಿ ಹಾಕಿದ ಹಳೆಯ ಗೋಣೀಚೀಲ ಕೂಡಾ ಅವಳ ಸ್ಮೃತಿಪಟಲದಲ್ಲಿ ಅಚ್ಚೊತ್ತಿ ಹೋಗಿದ್ದು ಯಾಕೆ ಎಂದು ಅವಳಿಗೇ ಗೊತ್ತಿಲ್ಲ. ಇಷ್ಟವೆನಿಸಿದವರು ಇದ್ದ ಕಡೆ ಪ್ರತಿಯೊಂದೂ ಇಷ್ಟ ಅನಿಸುತ್ತದೆಯೇ? ಇರಬಹುದು. ತಡ ಮಾಡದೆ ಪ್ರತ್ಯುತ್ತರಿಸಿದ್ದಳು ರೋಹಿಣಿ. ಪೇಟೆ, ಪಟ್ಟಣಗಳಲ್ಲಿ ಮಾತ್ರಾ ನಿಯೋಜನೆಗೊಳ್ಳುತ್ತಿದ್ದ ಸಾಂಸ್ಕೃತಿಕ ಸಮಾರಂಭ ಹಳ್ಳಿಯವರನ್ನೂ ಒಳಗೊಳ್ಳುವ ಉದ್ದೇಶದಿಂದ ಆ ಸಲದ ರಾಜ್ಯೋತ್ಸವದಲ್ಲಿ ಹಳ್ಳಿಯ ಕಡೆ ಮುಖ ಮಾಡಿದ್ದು, ಇವಳು ಉತ್ಸಾಹದಿಂದ ಅದರಲ್ಲಿ ಪಾಲ್ಗೊಂಡಿದ್ದು, ಕವನ ವಾಚಿಸಿದ್ದು, ಚಂದ್ರುವಿನ ಮನೆಗೆ ಹೋಗುವ ಸಂದರ್ಭ ಒದಗಿ ಬಂದಿದ್ದು, ಗೆಳೆತನ ಮುಂದುವರಿದಿದ್ದು, ಪ್ರತಿಯೊಂದೂ ತನ್ನ ಬದುಕನ್ನು ನಿರ್ದೇಶಿಸುವ ಹೆಜ್ಜೆಗುರುತುಗಳಾಗುತ್ತವೆಂದು ರೋಹಿಣಿ ಕನಸಲ್ಲಾದರೂ ಕಲ್ಪಿಸಿದ್ದಿತ್ತೇ? ಖಂಡಿತಾ ಇಲ್ಲ. ಮದುವೆಯ ಬಂಧನಕ್ಕೊಳಗಾಗುವ ತೀರ್ಮಾನ ಖಚಿತವಾದಾಗ ರೋಹಿಣಿಯ ಮನೆಯಲ್ಲಿ ವಿರೋಧ ಎದುರಾಗಿತ್ತು. “ನಿಂಗೇನು ತಲೆ ಕೆಟ್ಟಿದ್ಯಾ? ಹಳ್ಳಿಮನೆಗೆ ಹೋಗಿ ಸೇರ್ಕಂಡು ಕೊಟ್ಟಿಗೆ ಸಗಣಿ ಬಾಚೋಕೆ ನಿಂಗೇನು ಗ್ರಾಚಾರ? ಅವನಿಗೆ ಹೆಣ್ಣು ಕೊಡೋರು ಯಾರೂ ಸಿಕ್ಕಿರ್ಲಿಲ್ಲ ಅಂತ ಕಾಣ್ಸುತ್ತೆ. ನಿಂಗೆ ಬಲೆ ಬೀಸಿದಾನೆ...” ಅಮ್ಮನ ಮಾತು ಕಟುವಾದಷ್ಟೂ ಇವಳು ಬಿಗಿಯಾಗಿ,

“ನನ್ನ ಹಣೇಬರ ನಂದು. ನೀನ್ಯಾಕೆ ಅದರಲ್ಲಿ ಬಾಯಿ ಹಾಕ್ಕೊಂಡು ಬರ್ತಿ?” ತಿರುಗಿ ಬಿದ್ದಿದ್ದಳು ರೋಹಿಣಿ. ಹೆಚ್ಚು ವಾದಿಸಲು ಹೋಗದೆ, ವಾದಿಸಿದರೆ ಪ್ರಯೋಜನವಿಲ್ಲವೆಂದು ಅರ್ಥೈಸಿಕೊಂಡಿದ್ದ ಅಪ್ಪ ಮೌನಕ್ಕೆ ಶರಣಾದರೆ ಹರೆಯಕ್ಕೆ ಕಾಲಿಟ್ಟಿದ್ದ ತಮ್ಮನಿಗೆ ಈ ಪ್ರೇಮ ವ್ಯವಹಾರ ಕಚಗುಳಿ ಕೊಟ್ಟಂತೆ ರೋಮಾಂಚಕವಾಗಿತ್ತು. ಕೊನೆಗೂ ನಡೆದು ಹೋಗಿತ್ತು ಮದುವೆ ಸರಳವಾಗಿ, ಸುಮುಖವಾಗಿ...

★★★

ಕತೆಗಾರ್ತಿಯಾಗಿ, ಕವಯಿತ್ರಿಯಾಗಿ ಹೆಸರು ಮಾಡಬೇಕೆಂಬ ಬಯಕೆಗೆ ರೆಕ್ಕೆ ಮೂಡಿ ಆಕಾಶದಲ್ಲಿ ವಿಹರಿಸುವ ಕನಸು ಕಂಡ ದಿನಗಳವು. ಪ್ರಕೃತಿಯ ಮಡಿಲಲ್ಲಿ ಬದುಕು ಕಟ್ಟಿಕೊಂಡು ಹೊಸ ಹೊಸ ಅನುಭವಗಳನ್ನು ಬೊಕ್ಕಣಕ್ಕೆ ಸೇರಿಸಿಕೊಳ್ಳುತ್ತಾ, ಆ ಅನುಭವಗಳನ್ನು ಅಕ್ಷರರೂಪಕ್ಕಿಳಿಸುತ್ತಾ, ವರ್ಷಕ್ಕೆ ಒಂದೆರಡು ಬಾರಿಯಾದರೂ ಹಳ್ಳಿಮನೆಯ ವಿಶಾಲ ಅಂಗಳದಲ್ಲಿ ಸಣ್ಣದೊಂದು ಸಾಹಿತ್ಯ ಗೋಷ್ಠಿ. ಆದರದ ಆತಿಥ್ಯ. ಸುಖಸಂಕಥಾ ವಿನೋದ. ಸಂವಾದ. ಅಲ್ಲೊಂದಿಲ್ಲೊಂದರಂತೆ ಪತ್ರಿಕೆಗಳಲ್ಲಿ ಬೆಳಕು ಕಾಣುತ್ತಿರುವ ಕತೆ, ಕವನಗಳು ನಿರಂತರವಾಗುತ್ತಾ, ಅನುಭವದ ಗಟ್ಟಿತನ ಪಡೆದು ಸಹೃದಯರ, ವಿಮರ್ಶಕ ವೃಂದದ ಮೆಚ್ಚುಗೆ ಪಡೆದು ವಿಜೃಂಭಿಸುವ ಕನವರಿಕೆ. ಮೊದಲ ತುತ್ತಿನಲ್ಲೇ ಕಲ್ಲುಹರಳು ಸಿಕ್ಕಿತ್ತು. ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಕವನವನ್ನು ಚಂದ್ರು ಗಟ್ಟಿಯಾಗಿ ಓದಿದ ಪರಿಯಲ್ಲೇ ಸಣ್ಣದೊಂದು ವ್ಯಂಗ್ಯ ಕಂಡಿತ್ತು ರೋಹಿಣಿಗೆ. ತನ್ನ ಭ್ರಮೆ ಅಂದುಕೊಂಡಿದ್ದಳು ಶುರುವಿನಲ್ಲಿ. ಕವನ ಓದಿ ಆತ್ಮೀಯವಾಗಿ ಪ್ರತಿಕ್ರಿಯಿಸಿದ ಕವಿ ಬಂಧುವೊಬ್ಬರ ಪತ್ರ ಚಂದ್ರುವನ್ನು ಕೆರಳಿಸಿತು.

“ಯಾರಿದು?” ತುದಿಬೆರಳಲ್ಲಿ ಪತ್ರ ಹಿಡಿದು ಮುಖದೆದುರು ಅಲುಗಾಡಿಸುತ್ತಾ ಕೇಳಿದ್ದ.

“ಅವರ ಹೆಸರು ಗೊತ್ತಿಲ್ವಾ?” ಅಮಾಯಕತೆಯಿಂದ ಕೇಳಿದ್ದಳು ರೋಹಿಣಿ.

“ನಿಂಗ್ಯಾಕೆ ಕಾಗದ ಬರೆದಿದಾರೆ?”

“ಮೆಚ್ಚುಗೆ ತಿಳಿಸೋದು ತಪ್ಪಾ? ನೀನೊಬ್ಬ...”

ಏಕಾಂತದಲ್ಲಿ ಚಂದ್ರುವನ್ನು ಏಕವಚನದಿಂದ ಕರೆಯುವುದು ರೋಹಿಣಿಗೆ ಪ್ರಿಯವಾಗಿತ್ತು. ನಿಕಟತೆಯ ಸಂಕೇತವೆನಿಸುತ್ತಿತ್ತು.